| ಅವಧಿ | ಸಮಯ ಹಂಚಿಕೆ | ಎರಡನೇ ತರಗತಿ | | | | | ಮೂರನೇ ತರಗತಿ | | | | |
|---|---|---|---|---|---|---|---|---|---|---|---|
| | | ವಿಷಯ ಮತ್ತು ಪಾಠದ ಹೆಸರು | ಸಾಮರ್ಥ್ಯದ ವಿವರ | ಬಳಸಬಹುದಾದ ಬೋಧನಾ ಕಲಿಕಾ ಸಾಮಗ್ರಿಗಳು | ನಿರ್ವಹಣೆ | ಕಲಿಕಾ ಪ್ರಕ್ರಿಯೆ | ವಿಷಯ ಮತ್ತು ಪಾಠದ ಹೆಸರು | ಸಾಮರ್ಥ್ಯದ ವಿವರ | ಬಳಸಬಹುದಾದ ಬೋಧನಾ ಕಲಿಕಾ ಸಾಮಗ್ರಿಗಳು | ನಿರ್ವಹಣೆ | ಕಲಿಕಾ ಪ್ರಕ್ರಿಯೆ |
| 1 | 2 | 3 | 4 | 5 | 6 | 7 | 8 | 9 | 10 | 11 | 12 |
| 1ನೇ | 10 ನಿ | ಕನ್ನಡ ಕೋಗಿಲೆ | ಸರಳ ಹಾಗೂ ಬಳಕೆಯಲ್ಲಿರುವ ಪ್ರಾಸಪದಗಳನ್ನು ಆಲಿಸುವರು ಜೊತೆಗೆ ಅರ್ಥ ಮಾಡಿಕೊಳ್ಳುವರು. | ಅಭಿನಯ ಗೀತೆಗಳ ಸಂಗ್ರಹ | ಶಿಕ್ಷಕ | **<u>ಪೂರ್ವ ಸಿದ್ಧತಾ ಚಟುವಟಿಕೆ</u>**<br>"ಪುಟ್ಟ ಪುಟ್ಟ ನವಿಲೆ" ಅಭಿನಯ ಗೀತೆಯನ್ನು ಮಾಡಿಸುವರು. | ಕನ್ನಡ ಬಾವಿಯಲ್ಲಿ ಚಂದ್ರ | ಕಥನಗಳು, ವಿವರಣೆಗಳು, ಪದಬಂಧಗಳು ಮತ್ತು ಒಗಟುಗಳನ್ನು ಆಲಿಸುವರು ಜೊತೆಗೆ ಅರ್ಥ ಮಾಡಿಕೊಳ್ಳುವರು. | ಪದಬಂಧ ಅಕ್ಷರ ಗಡಿಯಾರದ ಚಾರ್ಟ್ | ಶಿಕ್ಷಕ | 2ನೇ ತರಗತಿಯ ಮಕ್ಕಳ ಜೊತೆಯಲ್ಲಿಯೇ 3ನೇ ತರಗತಿಯ ಮಕ್ಕಳನ್ನು ಚಟುವಟಿಕೆಯಲ್ಲಿ ತೊಡಗಿಸಿಕೊಳ್ಳುವರು |
| | 05 ನಿ | | | | | ಮಕ್ಕಳು ನೇರ ಬೋಧನೆಗೆ ಅಣಿಗೊಳ್ಳುವರು. | | | | | ಶಿಕ್ಷಕರು ಪದಬಂಧ ಮಾಡಲು ಹಿರೇಮಣಿಗೆ ಸೂಚನೆ ನೀಡುವರು |
| | 25 ನಿ | | | ಪ್ರಾಸ ಪದಗಳ ಮಿಂಚುಪಟ್ಟಿ | ಶಿಕ್ಷಕ | **<u>ಕಲಿಕಾಂಶ ಚಟುವಟಿಕೆ</u>**<br>ಶಿಕ್ಷಕರು ಪದ್ಯವನ್ನು ಸ್ವರಭಾರ ಮತ್ತು ಭಾವನೆಯೊಂದಿಗೆ ಹಾಡುವರು ಮತ್ತು ಸಾಮೂಹಿಕವಾಗಿ ಹಾಡಿಸುವರು. ಪ್ರಾಸಪದಗಳನ್ನು ಪರಿಚಯಿಸುವರು. | | | | ಹಿರೇಮಣಿ | ಶಿಕ್ಷಕರ ಸೂಚನೆಯಂತೆ ಹಿರೇಮಣಿ ನೇತೃತ್ವದಲ್ಲಿ ಮಕ್ಕಳು ಪದಬಂಧದ ಚಾರ್ಟನ್ನು ಆಧರಿಸಿ ಪದಗಳನ್ನು ರಚಿಸುವರು. ನೀಡಲಾದ ಅಕ್ಷರ ಗಡಿಯಾರದ ಸಹಾಯದಿಂದ ಪದಗಳನ್ನು ಬರೆಯುವರು. |
| | 10 ನಿ | | | | | ಶಿಕ್ಷಕರು ಪ್ರಾಸಪದಗಳನ್ನು ಬರೆಸುವಂತೆ ಮುಂದಿನ ಚಟುವಟಿಕೆಗೆ ಹಿರೇಮಣಿಗೆ ಸೂಚನೆ ನೀಡುವರು. | | | | | ಮೇಲಿನ ಚಟುವಟಿಕೆಯನ್ನು ಪರಿಶೀಲಿಸುವರು. |
| | 25 ನಿ | | | | ಹಿರೇಮಣಿ | ಶಿಕ್ಷಕರ ಸೂಚನೆಯಂತೆ ಹಿರೇಮಣಿ ನೇತೃತ್ವದಲ್ಲಿ ಪದ್ಯವನ್ನು ಪಠ್ಯಪುಸ್ತಕ ನೋಡಿ ನಕಲು ಮಾಡುವುದು ಮತ್ತು ಪ್ರಾಸಪದಗಳನ್ನು ಬರೆಸುವರು. | | | | ಶಿಕ್ಷಕ | ಶಿಕ್ಷಕರು ಪದ್ಯವನ್ನು ರಾಗವಾಗಿ, ಸನ್ನಿವೇಶಕ್ಕೆ ತಕ್ಕಂತೆ ಅಭಿನಯಿಸುತ್ತ ಹಾಡುವುದು ಮತ್ತು ಮಕ್ಕಳಿಂದ ಸಾಮೂಹಿಕವಾಗಿ ಹಾಡಿಸುವರು. |
| | 05 ನಿ | | | | | ಮೇಲಿನ ಚಟುವಟಿಕೆಯನ್ನು ಪರಿಶೀಲಿಸುವರು. | | | | | ಸಾಮೂಹಿಕವಾಗಿ ಹಾಡಲು ಸೂಚಿಸುವರು. |
| 2ನೇ | 10 ನಿ | ಗಣಿತ ಸಂಖ್ಯೆಗಳು | ನೂರರೊಳಗಿನ ಸಂಖ್ಯೆಗಳನ್ನು, ಬರೆಯುವರು, ಹತ್ತು, ಬಿಡಿಗಳಾಗಿ ವಿಸ್ತರಿಸುವರು | ಫಲಕಗಳು, ಕಡ್ಡಿಗಳು, ಗೋಲಿಗಳು, ಮಣಿಗಳು ಹುಣಸೆ ಬೀಜಗಳು, ಬಿಲ್ಲೆಗಳು, ಮಿಂಚುಪಟ್ಟಿಗಳು | ಶಿಕ್ಷಕ/ಶಿ | **<u>ಪೂರ್ವ ಸಿದ್ಧತಾ ಚಟುವಟಿಕೆ</u>** : " ಹತ್ತರ ಗಮ್ಮತ್ತು" ಅಭಿನಯ ಗೀತೆಯನ್ನು ಹಾಡಿಸುವರು (ಪ.ಪುದ ಪು.ಸಂ. 11) | ಗಣಿತ ಪೂರ್ಣಾಂಕಗಳು ಮತ್ತು ಸಂಖ್ಯಾ ಪಾಠಕಗಳು | 1-999 ರವರೆಗೆ ಎಣಿಕೆ, ಓದುವರು, ಬರೆಯುವರು | ಕಡ್ಡಿಗಳು, ಮಣಿಕಟ್ಟುಗಳು ಮತ್ತು ಬೀಜಗಳು | ಶಿಕ್ಷಕ/ಶಿ | 2ನೇ ತರಗತಿ ವಿದ್ಯಾರ್ಥಿಗಳೊಂದಿಗೆ ಮೂರನೇ ತರಗತಿ ಮಕ್ಕಳು ಚಟುವಟಿಕೆಯಲ್ಲಿ ಭಾಗವಹಿಸುವರು. |
| | 05 ನಿ | | | | | ಮಕ್ಕಳನ್ನು ಮುಂದಿನ ಚಟುವಟಿಕೆಗೆ ಅಣಿಗೊಳಿಸುವರು. | | | | | ಮುಂದಿನ ಚಟುವಟಿಕೆಗೆ ಸೂಚನೆ ನೀಡುವರು. |
| | 25 ನಿ | | | | ಶಿಕ್ಷಕ | **<u>ಕಲಿಕಾಂಶ ಚಟುವಟಿಕೆ</u>**<br>ಶಿಕ್ಷಕರು ಕಡ್ಡಿಗಳನ್ನು ಎಣಿಸಿ ಹತ್ತರ ಕಟ್ಟುಗಳು ಮತ್ತು ಬಿಡಿಗಳಾಗಿ ಗುಂಪು ಮಾಡುವ ವಿಧಾನವನ್ನು ತೋರಿಸಿಕೊಡುವರು. (ಪ.ಪುದ ಪು.ಸಂ.8 ರಲ್ಲಿರುವ ಚಟುವಟಿಕೆ 2,3 ಮತ್ತು 4ನ್ನು ಮಾಡುವರು) | | | | ಹಿರೇಮಣಿ | * ಕಡ್ಡಿಗಳನ್ನು ಕೊಟ್ಟು ಹತ್ತತ್ತರ ಕಟ್ಟು ಮಾಡಿಸುವರು.<br>* ಕೊಟ್ಟಿರುವ ಕಡ್ಡಿಗಳನ್ನು ಎಣಿಸಿ ಹತ್ತು ಮತ್ತು ಬಿಡಿಗಳಾಗಿ ಬರೆಯುವರು. |
| | 10 ನಿ | | | | | ಮುಂದಿನ ಚಟುವಟಿಕೆ ಬಗ್ಗೆ ಹಿರೇಮಣಿಗೆ ಸೂಚನೆ ನೀಡುವರು. | | | | | ಮೇಲಿನ ಚಟುವಟಿಕೆಯನ್ನು ಪರಿಶೀಲನೆ ಮಾಡುವರು |
| | 25 ನಿ | | | | ಹಿರೇಮಣಿ | ಕಲಿಕೆಯ ಅಂಶದ ಅಭ್ಯಾಸದಲ್ಲಿ ಕೊಟ್ಟಿರುವ ಸಂಖ್ಯೆಗಳನ್ನು ಹತ್ತು ಬಿಡಿಗಳಾಗಿ ವರ್ಗೀಕರಿಸಿ ಬರೆಸುವರು. (ಪ.ಪುದ ಪು.ಸಂ. 14) | | | | ಶಿಕ್ಷಕ/ಶಿ | **<u>ಕಲಿಕಾಂಶ ಚಟುವಟಿಕೆ</u>** ಶಿಕ್ಷಕರು ಕಡ್ಡಿಗಳನ್ನು ಎಣಿಸಿ ನೂರರ, ಹತ್ತರ ಮತ್ತು ಬಿಡಿಗಳಾಗಿ ಗುಂಪು ಮಾಡುವ ವಿಧಾನವನ್ನು ಚಟುವಟಿಕೆ ಮೂಲಕ ತೋರಿಸಿ ಕೊಡುವರು (ಪ.ಪುದ ಪು.ಸಂ. 7 ಮತ್ತು 8) |
| | 05 ನಿ | | | | | ಚಟುವಟಿಕೆಗಳ ಪರಿಶೀಲನೆ ಮಾಡುವರು | | | | | |

| ಅವಧಿ | ಸಮಯ ಹಂಚಿಕೆ | ಎರಡನೇ ತರಗತಿ | | | | | ಮೂರನೇ ತರಗತಿ | | | | |
|---|---|---|---|---|---|---|---|---|---|---|---|
| | | ವಿಷಯ ಮತ್ತು ಪಾಠದ ಹೆಸರು | ಸಾಮರ್ಥ್ಯದ ವಿವರ | ಬಳಸಬಹುದಾದ ಬೋಧನಾ ಕಲಿಕಾ ಸಾಮಗ್ರಿಗಳು | ನಿರ್ವಹಣೆ | ಕಲಿಕಾ ಪ್ರಕ್ರಿಯೆ | ವಿಷಯ ಮತ್ತು ಪಾಠದ ಹೆಸರು | ಸಾಮರ್ಥ್ಯದ ವಿವರ | ಬಳಸಬಹುದಾದ ಬೋಧನಾ ಕಲಿಕಾ ಸಾಮಗ್ರಿಗಳು | ನಿರ್ವಹಣೆ | ಕಲಿಕಾ ಪ್ರಕ್ರಿಯೆ |
| **1** | **2** | **3** | **4** | **5** | **6** | **7** | **8** | **9** | **10** | **11** | **12** |
| 3ನೇ | 40 ನಿ | ಸಾ.ಉ. ಉ.ಕಾ. | ನಿರುಪಯುಕ್ತ ವಸ್ತುಗಳಿಂದ ಆಟಿಕೆಗಳನ್ನು ತಯಾರಿಸುವ ಕೌಶಲ ಬೆಳೆಸುವುದು. | ಕರಿಹಲಗೆ ಬಣ್ಣದ ಪೆನ್ಸಿಲ್ | ಪೂ.ತ/ತ | ಶಿಕ್ಷಕರು ಎಲೆಯ ಚಿತ್ರವನ್ನು ಕರಿಹಲಗೆಯ ಮೇಲೆ ಬಿಡಿಸಿ, ಮಕ್ಕಳಿಗೆ ಚಿತ್ರ ಬಿಡಿಸಿ ಬಣ್ಣ ತುಂಬಿಸಲು ಹೇಳುವರು. | ಸಾ.ಉ. ಉ.ಕಾ. | ನಿರುಪಯುಕ್ತ ವಸ್ತುಗಳಿಂದ ಆಟಿಕೆಗಳನ್ನು ತಯಾರಿಸುವ ಕೌಶಲ ಬೆಳೆಸುವುದು. | ಕರಿಹಲಗೆ ಬಣ್ಣದ ಪೆನ್ಸಿಲ್ | ಪೂ.ತ/ತ | 2ನೇ ತರಗತಿ ಮಕ್ಕಳೊಂದಿಗೆ 3ನೇ ತರಗತಿಯ ಮಕ್ಕಳು ಚಟುವಟಿಕೆಯಲ್ಲಿ ಭಾಗವಹಿಸುವರು. |
| | 40 ನಿ | ರೇಡಿಯೋ ಕಾರ್ಯಕ್ರಮ | | ರೇಡಿಯೋ | ಪೂ/ತ ಮತ್ತು ಓರೆಗುಂಪು | ಪ್ರಸಾರ ಪೂರ್ವದಲ್ಲಿ ರೇಡಿಯೋ ಪಾಠವನ್ನು ಕೇಳಲು ಮಕ್ಕಳನ್ನು ಅಣಿಗೊಳಿಸುವುದು. ಪ್ರಸಾರ ಸಮಯದಲ್ಲಿ ಎಲ್ಲಾ ಮಕ್ಕಳು ಪ್ರಸಾರ ಕಾರ್ಯದಲ್ಲಿ ಭಾಗವಹಿಸುತ್ತಿದ್ದಾರೆಯೇ ಎಂದು ಖಾತ್ರಿಪಡಿಸಿಕೊಳ್ಳುವರು.<br><br>ಪ್ರಸಾರೋತ್ತರ ಸಮಯದಲ್ಲಿ ಬರುವ ಪ್ರಶ್ನೆಗಳನ್ನು ಕಪ್ಪು ಹಲಗೆಯ ಮೇಲೆ ಬರೆಯುವುದು ಮತ್ತು ಉತ್ತರವನ್ನು ಮರುದಿನ ಬರೆದುಕೊಂಡು ಬರುವಂತೆ ತಿಳಿಸುವರು. | ಚಿನ್ನರ ಚುಕ್ಕಿ ರೇಡಿಯೋ ಕಾರ್ಯಕ್ರಮ | | ರೇಡಿಯೋ | ಪೂ.ತ/ತ ಮತ್ತು ಓರೆಗುಂಪು | 2ನೇ ತರಗತಿಯ ಮಕ್ಕಳ ಜೊತೆ ಈ ತರಗತಿಯ ಮಕ್ಕಳು ಚಿನ್ನರ ಚುಕ್ಕಿ ರೇಡಿಯೋ ಕಾರ್ಯಕ್ರಮದಲ್ಲಿ ಭಾಗವಹಿಸುವರು. |
| 4ನೇ | 10 ನಿ | ಪರಿಸರ ಅಧ್ಯಯನ<br>1. ನಮ್ಮ ಸುತ್ತಲಿನ ಪ್ರಾಣಿಗಳು | ಸ್ಥಳೀಯ ಪ್ರಾಣಿಗಳನ್ನು ಗುರುತಿಸುವುದು | ಹಾಡುಗಳ ಧ್ವನಿಸುರುಳಿ<br>ಪ್ರಾಣಿ, ಪಕ್ಷಿಗಳ ಚಿತ್ರಗಳು | ಪೂ.ತ/ತ | **ಪೂರ್ವ ಸಿದ್ಧತಾ ಚಟುವಟಿಕೆ**<br>ಅಭಿನಯದೊಂದಿಗೆ ಹಾಡನ್ನು ಹಾಡುತ್ತಾ ಹಕ್ಕಿಗಳ ಕೂಗನ್ನು ಅನುಕರಣೆ ಮಾಡಿಸುವರು. | 1. ನಮ್ಮ ಸುತ್ತಲಿನ ಜೀವಿಗಳು | ನಮ್ಮ ಸುತ್ತಲಿನ ಪ್ರಾಣಿ ಮತ್ತು ಸಸ್ಯಗಳನ್ನು ಗುರುತಿಸುವುದು ಅವುಗಳ ನಡುವಿನ ಹೋಲಿಕೆ ಮತ್ತು ವ್ಯತ್ಯಾಸಗಳನ್ನು ತಿಳಿಯುವರು | ಪ್ರಾಣಿ, ಪಕ್ಷಿಗಳ ಚಿತ್ರಪಟಗಳು, ಸಸ್ಯಗಳು | ಪೂ.ತ/ತ | ಅಭಿನಯದೊಂದಿಗೆ ಹಾಡನ್ನು ಹಾಡುತ್ತಾ ಹಕ್ಕಿಗಳ ಕೂಗನ್ನು ಅನುಕರಣೆ ಮಾಡಿಸುವರು. |
| | 5 ನಿ | | | | | ಮಕ್ಕಳು ನೇರ ಬೋಧನೆಗೆ ಅಣಿಗೊಳ್ಳುವರು. | | | | ಸ್ವಯಂ ಕಲಿಕೆ | ನೀಡಿದ ಚಿತ್ರಗಳನ್ನು ಗುರುತಿಸಿ, ವಿಂಗಡಿಸುವಂತೆ ಸೂಚನೆ ನೀಡುವರು. |
| | 25 ನಿ | | | | ಪೂ.ತ/ತ | 1. ಚಿತ್ರಗಳನ್ನು ತೋರಿಸಿ ಪ್ರಾಣಿಗಳ ಹೆಸರನ್ನು ಹೇಳಿಸುವರು.<br>2. ಬಾಲ ಇರುವ ಪ್ರಾಣಿಗಳ ಹಾಗೂ ಕೊಕ್ಕು ಮತ್ತು ರೆಕ್ಕೆಗಳಿರುವ ಪಕ್ಷಿ ಚಿತ್ರಗಳನ್ನು ತೋರಿಸಿ ಹೆಸರನ್ನು ಹೇಳಿಸುವರು. | | | | | ಶಿಕ್ಷಕರು ನೀಡಿದ ಚಿತ್ರಪಟಗಳ ಮೇಲೆ ಆಯಾ ಪ್ರಾಣಿಪಕ್ಷಿಗಳ ಹೆಸರನ್ನು ಬರೆದು ಅವುಗಳನ್ನು ವರ್ಗೀಕರಿಸುವರು. |
| | 10 ನಿ | | | | | ಪ್ರಾಣಿ ಪಕ್ಷಿಗಳ ಚಿತ್ರಪಟಗಳಿಗೆ ಬಣ್ಣ ತುಂಬಲು ಹೇಳುವರು. | | | | | ಮಕ್ಕಳು ಮಾಡಿದ ಚಟುವಟಿಕೆಗಳನ್ನು ಗಮನಿಸಿ ಸೂಕ್ತ ಸಲಹೆಗಳನ್ನು ನೀಡುವರು. |
| | 25 ನಿ | | | | ಸ್ವಯಂ ಕಲಿಕೆ | ಶಿಕ್ಷಕರು ನೀಡಿದ ಪ್ರಾಣಿ ಪಕ್ಷಿಗಳ ಚಿತ್ರಗಳಿಗೆ ಬಣ್ಣ ಹಾಕುವರು ಹಾಗೂ ಅವುಗಳನ್ನು ಪರಸ್ಪರ ವಿನಿಮಯ ಮಾಡಿಕೊಂಡು ಗಮನಿಸುವರು. | | | | ಪೂ.ತ/ತ | ವರ್ಗೀಕರಿಸಿದ ಪ್ರಾಣಿ ಮತ್ತು ಪಕ್ಷಿಗಳ ಚಿತ್ರಗಳೊಂದಿಗೆ ಕೆಲವು ಸಸ್ಯಗಳನ್ನು ತೋರಿಸಿ ಅವುಗಳ ನಡುವಿನ ಹೋಲಿಕೆ, ವ್ಯತ್ಯಾಸಗಳ ಬಗ್ಗೆ ವಿವರಣೆ ನೀಡುವರು. |
| | 5 ನಿ | | | | | ಮಕ್ಕಳು ನಡೆಸಿದ ಚಟುವಟಿಕೆಗಳನ್ನು ಪರಿಶೀಲಿಸಿ ಅವಶ್ಯವೆನಿಸಿದರೆ ಸಲಹೆಗಳನ್ನು ನೀಡುವರು. | | | | | ತಮ್ಮ ಪರಿಸರದಲ್ಲಿ ಸಿಗುವ ಸಸ್ಯಗಳ ಎಲೆಗಳನ್ನು ಸಂಗ್ರಹಿಸಿ ತರಲು ಹೇಳುವರು. |

| ಅವಧಿ | ಸಮಯ ಹಂಚಿಕೆ | ಎರಡನೇ ತರಗತಿ | | | | | ಮೂರನೇ ತರಗತಿ | | | | |
|---|---|---|---|---|---|---|---|---|---|---|---|
| | | ವಿಷಯ ಮತ್ತು ಪಾಠದ ಹೆಸರು | ಸಾಮರ್ಥ್ಯದ ವಿವರ | ಬಳಸಬಹುದಾದ ಬೋಧನಾ ಕಲಿಕಾ ಸಾಮಗ್ರಿಗಳು | ವಿಧಾನ | ಕಲಿಕಾ ಪ್ರಕ್ರಿಯೆ | ವಿಷಯ ಮತ್ತು ಪಾಠದ ಹೆಸರು | ಸಾಮರ್ಥ್ಯದ ವಿವರ | ಬಳಸಬಹುದಾದ ಬೋಧನಾ ಕಲಿಕಾ ಸಾಮಗ್ರಿಗಳು | ವಿಧಾನ | ಕಲಿಕಾ ಪ್ರಕ್ರಿಯೆ |
| 1 | 2 | 3 | 4 | 5 | 6 | 7 | 8 | 9 | 10 | 11 | 12 |
| 1ನೇ | 10 ನಿ | ಭಾಷೆ<br>ಕೋಗಿಲೆ (ಕವನ) | ಸರಳ ಹಾಗೂ ಪಠ್ಯದಲ್ಲಿರುವ ಪ್ರಾಸಗೀತೆಗಳನ್ನು ಆಲಿಸುವುದರ ಜೊತೆಗೆ ಅರ್ಥಮಾಡಿಕೊಳ್ಳುವುದು | | ಶಿಕ್ಷಕ | **ಪೂರ್ವಸಿದ್ಧತಾ ಚಟುವಟಿಕೆ**<br>ಹಿಂದಿನ ಅವಧಿಯಲ್ಲಿ ಹೇಳಿಕೊಟ್ಟ ಪುಟ್ಟಪುಟ್ಟ ನವಿಲೆ ಅಭಿನಯ ಗೀತೆಯನ್ನು ಹಾಡಿಸುವರು | ಭಾಷೆ<br>ಬಾವಿಯಲ್ಲಿ ಚಂದ್ರ (ಕವನ) | ಕಥನಗಳು, ವಿವರಣೆಗಳು, ಪದಬಂಧಗಳು ಮತ್ತು ಒಗಟುಗಳನ್ನು ಆಲಿಸುವುದರ ಜೊತೆಗೆ ಅರ್ಥಮಾಡಿಕೊಳ್ಳುವುದು | ಸಣ್ಣ ಕಥೆ, ಹಾಡುಗಳ ಸಂಗ್ರಹ<br>ಸಮಾನಾರ್ಥಕ ಪದಗಳ ಕಾರ್ಡುಗಳು, ಪ್ರಾಸಪದಗಳ ಕಾರ್ಡುಗಳು | ಶಿಕ್ಷಕ | **ಪೂರ್ವ ಸಿದ್ಧತಾ ಚಟುವಟಿಕೆ** ಹಿಂದಿನ ಅವಧಿಯಲ್ಲಿ ಹೇಳಿಕೊಟ್ಟ ಪುಟ್ಟಪುಟ್ಟ ನವಿಲೆ ಅಭಿನಯ ಗೀತೆಯನ್ನು ಹಾಡಿಸುವರು<br>2ನೇ ತರಗತಿಯ ಚಟುವಟಿಕೆಯಲ್ಲಿಯೇ ಈ ಮಕ್ಕಳು ಭಾಗವಹಿಸುವರು. |
| | 5 ನಿ | | | | | ಮಕ್ಕಳು ನೇರ ಬೋಧನೆಗೆ ಸಿದ್ಧಗೊಳ್ಳುವರು | | | | | ಪ್ರತಿ ಮಗುವಿನಿಂದ ತನಗೆ ತಿಳಿದಿರುವ ಸಣ್ಣ ಕಥೆ ಅಥವಾ ಹಾಡನ್ನು ಹೇಳಿಸಲು ಶಿಕ್ಷಕರು ಹಿರೇಮಣಿಗೆ ಸೂಚಿಸುವರು.. |
| | 25 ನಿ | | | | ಶಿಕ್ಷಕ/ಕಿ | **ಕಲಿಕಾಂಶ ಚಟುವಟಿಕೆ**<br>• ಹಿಂದಿನ ಅವಧಿಯಲ್ಲಿ ಕಲಿಸಿದ ಹಾಡನ್ನು ಪುನರಾವರ್ತಿಸುವರು<br>• ಸರದಿಯನುಸಾರ ವೈಯಕ್ತಿಕವಾಗಿ ಹಾಡಿಸುವರು<br>• ಹೊಸ ಪದಗಳಿಗೆ ಸಮಾನಾರ್ಥ ಪದಗಳನ್ನು ನೀಡುವರು.<br>• ಪ್ರಾಸ ಪದಗಳ ಜೋಡಿಯನ್ನು ಕರಿಹಲಗೆಯ ಮೇಲೆ ಬರೆಯುವರು. | | | | ಹಿರೇಮಣಿ | [ಹಿರೇಮಣಿ ಪ್ರತಿ ವಿದ್ಯಾರ್ಥಿಯಿಂದ ಹಾಡು ಅಥವಾ ಕಥೆಯನ್ನು ಹೇಳಿಸುವರು, ಉಳಿದವರು ಆಲಿಸುವರು.] |
| | 10 ನಿ | | | | | ಪದ್ಯದ ಮೊದಲ ಆರುಸಾಲುಗಳನ್ನು ಕಂಠಪಾಠ ಮಾಡಲು ಸೂಚಿಸುವರು. | | | | | • ಕೊಟ್ಟ ಚಟುವಟಿಕೆಯ ಬಗ್ಗೆ ವಿದ್ಯಾರ್ಥಿಗಳೊಡನೆ ಸಂಭಾಷಣೆ ಮಾಡಿ ದೃಢಪಡಿಸಿಕೊಳ್ಳುವರು. |
| | 25 ನಿ | | | | ಹಿ/ಸ್ವಯಂಕಲಿಕೆ | [ಕಂಠಪಾಠ ಮಾಡುವರು] ಶಿಕ್ಷಕರ ಸೂಚನೆಯಂತೆ ಹಿರೇಮಣಿಯು ಮಕ್ಕಳಿಗೆ ಸಾಮೂಹಿಕವಾಗಿ ಪದ್ಯವನ್ನು ಹಾಡಿಸುವರು. | | | | ಶಿಕ್ಷಕ | • ಹಿಂದಿನ ಅವಧಿಯಲ್ಲಿ ಕಲಿಸಿದ ಹಾಡನ್ನು ಪುನರಾವರ್ತಿಸುವರು<br>• ಸರದಿಯನುಸಾರ ವೈಯಕ್ತಿಕವಾಗಿ ಹಾಡಿಸುವರು<br>• ಹೊಸ ಪದಗಳಿಗೆ ಸಮಾನಾರ್ಥ ಪದಗಳನ್ನು ನೀಡುವರು.<br>• ಪ್ರಾಸ ಪದಗಳ ಜೋಡಿಯನ್ನು ಕರಿಹಲಗೆಯ ಮೇಲೆ ಬರೆಯುವರು. |
| | 5 ನಿ | | | | | ವಿದ್ಯಾರ್ಥಿಗಳ ಕಂಠಪಾಠವನ್ನು ದೃಢಪಡಿಸಿಕೊಳ್ಳುವರು. | | | | | ಶಿಕ್ಷಕರು ಅಭ್ಯಾಸದಲ್ಲಿರುವ ಮೊದಲ ಎರಡು ಪ್ರಶ್ನೆಗಳಿಗೆ ಉತ್ತರವನ್ನು ಕಂಡುಹಿಡಿಯಲು ಸೂಚಿಸುವರು |
| 2ನೇ | 10 ನಿ | ಗಣಿತ<br>ಸಂಖ್ಯೆಗಳು | ನೂರರೊಳಗಿನ ಸಂಖ್ಯೆಗಳನ್ನು ಬರೆಯುವುದು, ಹತ್ತು ಬಿಡಿಗಳಾಗಿ ವಿಸ್ತರಿಸುವುದು. | ಚಿಲಕಗಳು, ಕಡ್ಡಿಗಳು, ಗೋಲಿಗಳು, ಮಣಿಗಳು, ಹುಣಿಸೆ ಬೀಜಗಳು, ಬಳ್ಳಿಗಳು, ಮಿಂಚುಪಟ್ಟಿಗಳು | ಶಿಕ್ಷಕ/ಕಿ | **ಪೂರ್ವ ಸಿದ್ಧತಾ ಚಟುವಟಿಕೆ**<br>ಸಂಖ್ಯೆಗಳಿರುವ ಮಿಂಚುಪಟ್ಟಿಗಳನ್ನು ತೋರಿಸಿ ಮಕ್ಕಳಿಂದ ಓದಿಸುವರು. | ಗಣಿತ<br>ಪೂರ್ಣಾಂಕಗಳು ಮತ್ತು ಸಂಖ್ಯಾ ಮಾಚಕಗಳು | 1-999 ರವರೆಗೆ ಎಣಿಕೆ, ಓದುವುದು, ಬರೆಯುವುದು | ಕಡ್ಡಿಗಳು, ಮಣಿಕಟ್ಟುಗಳು, ಹುಣಿಸೆ ಬೀಜಗಳು, | ಶಿಕ್ಷಕ/ಕಿ | 2ನೇ ತರಗತಿಯ ವಿದ್ಯಾರ್ಥಿಗಳೊಂದಿಗೆ ಚಟುವಟಿಕೆಯಲ್ಲಿ ಭಾಗವಹಿಸುವರು. |
| | 5 ನಿ | | | | | ಮಕ್ಕಳು ಮುಂದಿನ ಚಟುವಟಿಕೆಗೆ ಅಣಿಯಾಗುವರು. | | | | | ಪ.ಪು.ದ ಅಭ್ಯಾಸದ ಲೆಕ್ಕಗಳನ್ನು ಮಾಡಲು ಸೂಚಿಸುವರು. |
| | 25 ನಿ | | | | ಶಿಕ್ಷಕ/ಕಿ | **ಕಲಿಕಾಂಶ ಚಟುವಟಿಕೆ**<br>ಮಿಂಚುಪಟ್ಟಿಯಲ್ಲಿರುವ ಸಂಖ್ಯೆಗನುಗುಣವಾಗಿ ಸಂಖ್ಯೆಗಳನ್ನು ಹತ್ತು ಮತ್ತು ಬಿಡಿಗಳಾಗಿ ವಿಂಗಡಿಸಿ ಬರೆಯುವ ಚಟುವಟಿಕೆ ಮಾಡುವರು. | | | | ಹಿರೇಮಣಿ | ಕೊಟ್ಟಿರುವ ಸಂಖ್ಯೆಗಳನ್ನು ನೂರು, ಹತ್ತು ಬಿಡಿಗಳಾಗಿ ವರ್ಗೀಕರಿಸಿ ಬರೆಯುವರು ಮತ್ತು ಓದುವರು (ಪ.ಪು.ದ ಪು.ಸಂ.9) |
| | 5 ನಿ | | | | | ಮುಂದಿನ ಚಟುವಟಿಕೆಗೆ ಸೂಚನೆ ನೀಡುವರು | | | | | ಮೇಲಿನ ಚಟುವಟಿಕೆ ಪರಿಶೀಲನೆ ಮಾಡುವರು |
| | 25 ನಿ | | | | ಹಿರೇಮಣಿ | **ಕಲಿಕಾಂಶ ಚಟುವಟಿಕೆ**<br>ಕೊಟ್ಟಿರುವ ಮಿಂಚುಪಟ್ಟಿಗಳನ್ನು ನೋಡಿ ಅದರಲ್ಲಿರುವ ಸಂಖ್ಯೆಗಳನ್ನು ಹತ್ತು, ಬಿಡಿಗಳಾಗಿ ವಿಂಗಡಿಸಿ ಬರೆಯಲು ಸೂಚನೆ ನೀಡುವರು. | | | | ಶಿಕ್ಷಕ/ಕಿ | **ಕಲಿಕಾಂಶ ಚಟುವಟಿಕೆ** ಹತ್ತು ಹಾಗೂ ನೂರರಂತೆ ಕಟ್ಟುಗಳನ್ನಾಗಿ ಮಾಡಿರುವ ಕಡ್ಡಿಗಳ ಕಟ್ಟುಗಳನ್ನು ಸ್ಥಾನಬೆಲೆ ಮಣಿಕಟ್ಟಿನ ಸಹಾಯದಿಂದ ಸಂಖ್ಯೆ ಮತ್ತು ಪದಗಳಲ್ಲಿ ಬರೆಯುವ ಚಟುವಟಿಕೆ ಮಾಡಿಸುವರು. |
| | 10 ನಿ | | | | | ಚಟುವಟಿಕೆಗಳ ಪರಿಶೀಲನೆ ಮಾಡುವರು. | | | | | |

**2ನೇ ದಿನ**



| ಅವಧಿ | ಸಮಯ ನಿಮಿಷ | ಎರಡನೇ ತರಗತಿ | | | | | ಮೂರನೇ ತರಗತಿ | | | | |
|---|---|---|---|---|---|---|---|---|---|---|---|
| | | ವಿಷಯ ಮತ್ತು ಪಾಠದ ಹೆಸರು | ಸಾಮರ್ಥ್ಯ ವಿವರ | ಬಳಸಬಹುದಾದ ಬೋಧನಾ ಕಲಿಕಾ ಸಾಮಗ್ರಿಗಳು | ವಿಧಾನ | ಕಲಿಕಾ ಪ್ರಕ್ರಿಯೆ | ವಿಷಯ ಮತ್ತು ಪಾಠದ ಹೆಸರು | ಸಾಮರ್ಥ್ಯ ವಿವರ | ಬಳಸಬಹುದಾದ ಬೋಧನಾ ಕಲಿಕಾ ಸಾಮಗ್ರಿಗಳು | ವಿಧಾನ | ಕಲಿಕಾ ಪ್ರಕ್ರಿಯೆ |
| 1 | 2 | 3 | 4 | 5 | 6 | 7 | 8 | 9 | 10 | 11 | 12 |
| 3ನೇ | 40 ನಿ | ಜೀವನ ವಿಜ್ಞಾನ | ಸಹಕಾರ ಮನೋಭಾವನೆ ಮತ್ತು ಬೆಳೆಸುವುದು | ನೀತಿಕಥೆಗಳಿರುವ ಪುಸ್ತಕಗಳು ಇರುವ ಮತ್ತು ಪಾರಿವಾಳ ಚಿತ್ರಪಟಗಳು | ಶಿಕ್ಷಕ/ಕಿ | ಮಕ್ಕಳಿಗೆ ತ್ಯಾಗ ಮತ್ತು ಸಹಕಾರ ಮನೋಭಾವನೆ ಬೆಳೆಸುವಂತಹ ಮೌಲ್ಯವುಳ್ಳ ಕಥೆಗಳನ್ನು ಹೇಳುವುದು ಉದಾ: ಇರುವೆ ಮತ್ತು ಪಾರಿವಾಳದ ಕಥೆಗಳನ್ನು ಹೇಳುವುದು ಈ ಮಧ್ಯೆ ಎಲ್ಲ ಮಕ್ಕಳು ಆಲಿಸುತ್ತಿದ್ದಾರೆಯೇ ಎಂದು ಖಾತ್ರಿ ಮಾಡಿಕೊಂಡು ಭಾವನಾತ್ಮಕವಾಗಿ ಕಥೆ ಹೇಳುವುದು. ಮಧ್ಯೆ ಮಧ್ಯೆ ಸಣ್ಣ ಸಣ್ಣ ಪ್ರಶ್ನೆಗಳನ್ನು ಕೇಳಿ ಉತ್ತರ ಪಡೆಯುವರು. | ಜೀವನ ವಿಜ್ಞಾನ | ಸಹಕಾರ ಮನೋಭಾವನೆ ಮತ್ತು ಬೆಳೆಸುವುದು | ನೀತಿಕಥೆಗಳಿರುವ ಪುಸ್ತಕಗಳು ಇರುವ ಮತ್ತು ಪಾರಿವಾಳ ಚಿತ್ರಪಟಗಳು | ಶಿಕ್ಷಕ/ಕಿ | 2ನೇ ತರಗತಿಯ ಮಕ್ಕಳ ಜೊತೆಯಲ್ಲಿ 3ನೇ ತರಗತಿಯ ಮಕ್ಕಳೂ ಭಾಗವಹಿಸುವರು. |
| | 40 ನಿ | ಚಿಣ್ಣರ ಚುಕ್ಕಿ ರೇಡಿಯೋ ಕಾರ್ಯಕ್ರಮ | — | ರೇಡಿಯೋ | ಶಿಕ್ಷಕ/ಕಿ | ರೇಡಿಯೋ ಪಾಠವನ್ನು ಕೇಳಲು ಮಕ್ಕಳನ್ನು ಅಣಿಗೊಳಿಸುವುದು. ಪ್ರಸಾರ ಸಮಯದಲ್ಲಿ ಎಲ್ಲ ಮಕ್ಕಳು ಪ್ರಸಾರ ಕಾಲದಲ್ಲಿ ಭಾಗವಹಿಸುತ್ತಾರೆಯೇ ಎಂದು ಖಾತ್ರಿ ಮಾಡಿಕೊಂಡು ಅಣಿಗೊಳಿಸುವುದು ಪ್ರಸಾರೋತ್ತರ ಸಮಯದಲ್ಲಿ ಬರುವ ಪ್ರಶ್ನೆಗಳನ್ನು ಕಪ್ಪು ಹಲಗೆಯ ಮೇಲೆ ಬರೆಯುವುದು ಮತ್ತು ಉತ್ತರವನ್ನು ಮರುದಿನ ಬರೆದುಕೊಂಡು ಬರುವಂತೆ ತಿಳಿಸುವರು. | ಚಿಣ್ಣರ ಚುಕ್ಕಿ ರೇಡಿಯೋ ಕಾರ್ಯಕ್ರಮ | — | ರೇಡಿಯೋ | ಶಿಕ್ಷಕ/ಕಿ | 2ನೇ ತರಗತಿಯ ಮಕ್ಕಳ ಚಟುವಟಿಕೆಯಲ್ಲಿ 3ನೇ ತರಗತಿಯ ಮಕ್ಕಳು ಭಾಗವಹಿಸುವರು. |
| 4ನೇ | 10 ನಿ | ಪರಿಸರ ಅಧ್ಯಯನ | ಸ್ಥಳೀಯ ಪ್ರಾಣಿಗಳನ್ನು ಗುರುತಿಸುವರು | ಪ್ರಾಣಿ, ಪಕ್ಷಿ, ಕೀಟಗಳ ಚಿತ್ರಪಟಗಳು ಕರಿಹಲಗೆ ಸೀಮೆಸುಣ್ಣ | ಶಿಕ್ಷಕ | **ಪೂರ್ವ ಸಿದ್ಧತಾ ಚಟುವಟಿಕೆ** ಪಂಚತಂತ್ರದ ಕಥೆಗಳಲ್ಲಿ ಇರುವ (ಪ್ರಾಣಿಗಳ ಬಗ್ಗೆ) ಕಥೆಯನ್ನು ಹೇಳುವರು. | ಪರಿಸರ ಅಧ್ಯಯನ ಮತ್ತು ನಮ್ಮ ಸುತ್ತಲಿನ ಜೀವಿಗಳು | ನಮ್ಮ ಸುತ್ತಲಿನ ಪ್ರಾಣಿ ಮತ್ತು ಸಸ್ಯಗಳನ್ನು ಗುರುತಿಸುವರು. | ಸಸ್ಯಗಳು ಮತ್ತು ಪ್ರಾಣಿಗಳ ಚಿತ್ರಗಳು ಮತ್ತು ಸಂಗ್ರಹಿಸಿದ ಎಲೆಗಳು | ಶಿಕ್ಷಕ | **ಪೂರ್ವ ಸಿದ್ಧತಾ ಚಟುವಟಿಕೆ** ಪಂಚತಂತ್ರದಲ್ಲಿ ಇರುವ (ಪ್ರಾಣಿಗಳ ಬಗ್ಗೆ) ಕಥೆಯನ್ನು ಹೇಳುವರು. |
| | 5 ನಿ | | | | | **ಕಲಿಕಾಂಶ ಚಟುವಟಿಕೆ** ಮಕ್ಕಳಿಗೆ ಪ್ರಾಣಿ, ಪಕ್ಷಿಗಳ ಚಿತ್ರಪಟಗಳನ್ನು ನೀಡಿ ಅವುಗಳಲ್ಲಿ ತಮ್ಮ ಸುತ್ತಮುತ್ತಲೂ ನೋಡಿರುವ ಮತ್ತು ನೋಡದೇ ಇರುವ ಪ್ರಾಣಿ ಪಕ್ಷಿಗಳ ಚಿತ್ರಗಳನ್ನು ವರ್ಗೀಕರಿಸಲು ಸೂಚಿಸುವರು. | | | | | ಮುಂದಿನ ಪಾಠಕ್ಕೆ ಸಿದ್ಧತೆ ಮಾಡಿಕೊಳ್ಳುವುದು. |
| | 25 ನಿ | | | | ಮಕ್ಕಳು | ಶಿಕ್ಷಕರ ಸೂಚನೆಗಳಂತೆ ಮಕ್ಕಳು ಚಟುವಟಿಕೆಯಲ್ಲಿ ತೊಡಗುವರು. | | | | ಶಿಕ್ಷಕ | ಹಿಂದಿನ ದಿನದ ಅವಧಿಯಲ್ಲಿ ನೀಡಿದ ಸೂಚನೆಯಂತೆ ಮಕ್ಕಳು ತಂದಿರುವ ಎಲೆಗಳನ್ನು ತೋರಿಸಿ, ಇದು ಯಾವ ಸಸ್ಯದ ಎಲೆ ? ಎಂದು ಕೇಳುವರು. ಮಕ್ಕಳ ಉತ್ತರವನ್ನು ನಿರೀಕ್ಷಿಸುವರು ಮತ್ತು ತಾವೇ ಹೇಳುವರು. ನಂತರ ಕೆಲವು ಸಸ್ಯದ ಮತ್ತು ಪ್ರಾಣಿಗಳ ಚಿತ್ರಪಟಗಳನ್ನು ಇಟ್ಟುಕೊಂಡು ಪ್ರಾಣಿಗಳಿಗೂ ಸಸ್ಯಗಳಿಗೂ ಇರುವ ಭೌತಿಕ ವ್ಯತ್ಯಾಸಗಳನ್ನು ವಿವರಿಸುವರು. |
| | 10 ನಿ | | | | ಶಿಕ್ಷಕ | ಮಕ್ಕಳಿಗೆ ನೀಡಿದ ಚಟುವಟಿಕೆಗಳನ್ನು ಪರಿಶೀಲಿಸಿ, ಮಾರ್ಗದರ್ಶನ ಮಾಡುವರು. | | | | | ಶಿಕ್ಷಕರು, ಮಕ್ಕಳಿಗೆ ನೀವು ನಿಮ್ಮ ಸುತ್ತಮುತ್ತಲಿನ ಪರಿಸರದಲ್ಲಿ ನೋಡಿರುವ ಸಸ್ಯಗಳು ಮತ್ತು ಪ್ರಾಣಿಗಳ ಹೆಸರುಗಳನ್ನುಪಟ್ಟಿ ಮಾಡಲು ತಿಳಿಸುವರು. |
| | 25 ನಿ | | | | ಶಿಕ್ಷಕ | **ಕಲಿಕಾಂಶ ಚಟುವಟಿಕೆ :** ಶಿಕ್ಷಕರು, ಪ್ರಾಣಿ, ಪಕ್ಷಿ ಮತ್ತು ಕೀಟಗಳ ಚಿತ್ರಪಟಗಳನ್ನು ತೋರಿಸುತ್ತಾ, ಇವುಗಳಲ್ಲಿ ಮನೆಯ ಒಳಗೆ ಮತ್ತು ಮನೆಯ ಹೊರಗೆ ನೋಡಿರುವ ಪ್ರಾಣಿ, ಪಕ್ಷಿಗಳ ಹೆಸರನ್ನು ಕರಿಹಲಗೆ ಮೇಲೆ ಬರೆದು ಅವುಗಳ ಆಹಾರ ಮತ್ತು ವಾಸಸ್ಥಳದ ಬಗ್ಗೆ ವಿವರಣೆ ನೀಡುವರು. | | | | ಮಕ್ಕಳು | ಮಕ್ಕಳು, ಶಿಕ್ಷಕರು ನೀಡಿದ ಚಟುವಟಿಕೆಗಳನ್ನು ಮಾಡುವರು. |
| | 5 ನಿ | | | | ಶಿಕ್ಷಕ | ಶಿಕ್ಷಕರು ಮಕ್ಕಳಿಗೆ ತಾವು ತಿಳಿದಿರುವ 5 ಪ್ರಾಣಿಗಳ 5 ಪಕ್ಷಿಗಳ ಹೆಸರುಗಳನ್ನು ಪಟ್ಟಿ ಮಾಡಿ ಕೊಂಡು ಬರಲು ತಿಳಿಸುವರು. | | | | ಶಿಕ್ಷಕ | ಮಕ್ಕಳು ಮಾಡಿದಂತಹ ಚಟುವಟಿಕೆಗಳನ್ನು ಶಿಕ್ಷಕರು ಪರಿಶೀಲಿಸುವರು ಮತ್ತು ಮಾರ್ಗದರ್ಶನ ಮಾಡುವರು. |

| | | ಎರಡನೇ ತರಗತಿ | | | | | ಮೂರನೇ ತರಗತಿ | | | | |
|---|---|---|---|---|---|---|---|---|---|---|---|
| ಅವಧಿ | ಸಮಯ ಹಂಚಿಕೆ | ವಿಷಯ ಮತ್ತು ಪಾಠದ ಹೆಸರು | ಸಾಮರ್ಥ್ಯದ ವಿವರ | ಬಳಸಬಹುದಾದ ಬೋಧನಾ ಕಲಿಕಾ ಸಾಮಗ್ರಿಗಳು | ನಿರ್ವಹಣೆ | ಕಲಿಕಾ ಪ್ರಕ್ರಿಯೆ | ವಿಷಯ ಮತ್ತು ಪಾಠದ ಹೆಸರು | ಸಾಮರ್ಥ್ಯದ ವಿವರ | ಬಳಸಬಹುದಾದ ಬೋಧನಾ ಕಲಿಕಾ ಸಾಮಗ್ರಿಗಳು | ನಿರ್ವಹಣೆ | ಕಲಿಕಾ ಪ್ರಕ್ರಿಯೆ |
| **1** | **2** | **3** | **4** | **5** | **6** | **7** | **8** | **9** | **10** | **11** | **12** |
| 1ನೇ | 10 ನಿ | ಭಾಷೆ<br>ಕೋಗಿಲೆ (ಕವನ) | ಸರಳ ಹಾಗೂ ಬಳಕೆಯಲ್ಲಿರುವ ಪ್ರಾಸಗೀತೆಗಳನ್ನು ಆಲಿಸುವುದರ ಜೊತೆಗೆ ಅರ್ಥಮಾಡಿಕೊಳ್ಳುವುದು | ಕಥೆಗಳ ಸಂಗ್ರಹ<br>● ಪ್ರಾಣಿ ಮತ್ತು ಪಕ್ಷಿಗಳ ಹೆಸರನ್ನುಸೂಚಿಸುವ ಚೀಟಿಗಳು<br>● ಪ್ರಾಸಪದಗಳ ಪಟ್ಟಿ, ಪ್ರಶ್ನಾವಳಿ ಕಾರ್ಡು | ಶಿಕ್ಷಕ | **ಪೂರ್ವ ಸಿದ್ಧತಾ ಚಟುವಟಿಕೆ**<br>ಆಲಿಸುವ ಕ್ರಿಯೆಗಾಗಿ ಶಿಕ್ಷಕರು 'ಒಗ್ಗಟ್ಟಿನಲ್ಲಿ ಬಲವಿದೆ ಎಂಬ ನೀತಿ ಕಥೆಯನ್ನು ಹೇಳುವರು. | ಭಾಷೆ<br>ಬಾವಿಯಲ್ಲಿ ಚಂದ್ರ (ಕವನ) | ಕಥನಗಳು, ವಿವರಣೆಗಳು, ಪದಬಂಧಗಳು ಮತ್ತು ಒಗಟುಗಳನ್ನು ಆಲಿಸುವುದರ ಜೊತೆಗೆ ಅರ್ಥಮಾಡಿಕೊಳ್ಳುವುದು | ಕಥಗಳ ಸಂಗ್ರಹ, ಪದ್ಯರೂಪದಲ್ಲಿರುವ ಒಗಟುಗಳ ಸಂಗ್ರಹ, ಚಿತ್ರಪಟ | ಶಿಕ್ಷಕ/ಕಿ | **ಪೂರ್ವ ಸಿದ್ಧತಾ ಚಟುವಟಿಕೆ**<br>ಆಲಿಸುವ ಕ್ರಿಯೆಗಾಗಿ ಶಿಕ್ಷಕರು 'ಒಗ್ಗಟ್ಟಿನಲ್ಲಿ ಬಲವಿದೆ' ಎಂಬ ನೀತಿ ಕಥೆಯನ್ನು ಹೇಳುವರು. |
| | 5 ನಿ | | | | | ಮುಂದಿನ ಚಟುವಟಿಕೆಗೆ ಹಿರೇಮಣಿಗೆ ಸೂಚನೆ ನೀಡುವರು | | | | | ಮಕ್ಕಳು ಮುಂದಿನ ಚಟುವಟಿಕೆಗೆ ಅಣಿಯಾಗುವರು |
| | 25 ನಿ | | | | ಹಿರೇಮಣಿ | ● ಪ್ರಾಣಿ ಮತ್ತು ಪಕ್ಷಿಗಳ ಕೂಗನ್ನು ಅನುಕರಿಸುವ ಚಟುವಟಿಕೆ ಮಾಡಿಸುವರು. ಭಾಷಾ ಅಭ್ಯಾಸದಲ್ಲಿರುವ ಪ್ರಾಸಪದಗಳನ್ನು ನಕಲು ಮಾಡಲು ಸೂಚಿಸುವರು.<br>[ಧ್ವನಿ ಅನುಕರಣೆಯ ಆಟವನ್ನು ಆಡಿಸುವರು] | | | | ಶಿಕ್ಷಕ/ಕಿ | **ಒಗಟು ಬಿಡಿಸು ಜಾಣ** ಪದ್ಯ ರೂಪದ ಒಗಟುಗಳನ್ನು ಶಿಕ್ಷಕರು ಹೇಳಿ ಮಕ್ಕಳಿಂದ ಉತ್ತರವನ್ನು ಪಡೆಯುವರು.<br>**ಉದಾ** : ನಾರಿ ಸೀರೆಯನ್ನುಟ್ಟು ತಾ ನಲಿಯುತಿಹಳು<br>ನೀರ ಕೊಡಗಳ ಹೊತ್ತು ತಾ ಮೆರೆಯುತಿಹಳು<br>ನೋಡಿದವರಿಗೆ ಮೂರು ಕಣ್ಣ ತೋರುತಿಹಳು<br>ಬೇಡಿದವರಿಗೆ ಅಮೃತ ಸವಿ ನೀಡುವಳು<br>[ತೆಂಗಿನಕಾಯಿ]<br>ಮಕ್ಕಳನ್ನು ಎರಡು ಗುಂಪುಗಳಾಗಿ ಮಾಡಿ ಪರಸ್ಪರ ಒಗಟು ಬಿಡಿಸುವ ಚಟುವಟಿಕೆ ಮಾಡಿಸುವರು. |
| | 10 ನಿ | | | | | ಮಕ್ಕಳು ಮುಂದಿನ ಚಟುವಟಿಕೆಗೆ ಅಣಿಯಾಗುವರು | | | | | ಪಠ್ಯಪುಸ್ತಕದ 'ಬಾವಿಯಲ್ಲಿ ಚಂದ್ರ' ಪದ್ಯಕ್ಕೆ ನೀಡಲಾದ ದೃಶ್ಯವನ್ನು ವೀಕ್ಷಿಸಿ ಸಾಧ್ಯವಿರುವಷ್ಟು ಸರಳ ವಾಕ್ಯಗಳನ್ನು ಬರೆಯಲು ಸೂಚಿಸುವರು. |
| | 25ನಿ | | | | ಶಿಕ್ಷಕ | ಅಭ್ಯಾಸದಲ್ಲಿ ನೀಡಿರುವ ಪ್ರಶ್ನೆಗಳಿಗೆ ವಿದ್ಯಾರ್ಥಿಗಳಿಂದ ಉತ್ತರವನ್ನು ಪಡೆದು ಕರಿಹಲಗೆಯ ಮೇಲೆ ಬರೆಯುವರು. ವಿದ್ಯಾರ್ಥಿಗಳು ತಮ್ಮ ಪುಸ್ತಕದಲ್ಲಿ ಬರೆದುಕೊಳ್ಳುವರು. [ಅಭ್ಯಾಸ 'ಅ' ಮತ್ತು 'ಆ'] | | | | ಸ್ವಯಂಕಲಿಕೆ | ದೃಶ್ಯವನ್ನು ವೀಕ್ಷಿಸಿ ಸರಳ ವಾಕ್ಯಗಳನ್ನು ರಚಿಸುವರು. |
| | 5 ನಿ | | | | | ವಿದ್ಯಾರ್ಥಿಗಳು ಬರೆದಿರುವುದನ್ನು ಪರಿಶೀಲಿಸುವರು | | | | | ಬರೆದ ವಾಕ್ಯಗಳನ್ನು ಪರಿಶೀಲಿಸುವರು. |
| 2ನೇ | 10 ನಿ | ಗಣಿತ<br>ಸಂಖ್ಯೆಗಳು | ನೂರರೊಳಗಿನ ಸಂಖ್ಯೆಗಳನ್ನು, ಬರೆಯುವುದು, ಹತ್ತು ಬಿಡಿಗಳಾಗಿ ವಿಸ್ತರಿಸುವುದು | ಫಲಕಗಳು, ಕಡ್ಡಿಗಳು, ಗೋಲಿಗಳು, ಮಣಿಗಳು ಹುಣಸೆ ಬೀಜಗಳು, ಬಿಲ್ಲೆಗಳು, ಮಿಂಚುಪಟ್ಟಿಗಳು | ಶಿಕ್ಷಕ | **ಪೂರ್ವ ಸಿದ್ಧತಾ ಚಟುವಟಿಕೆ**<br>"ಅಣ್ಣ ತಂಗಿಯರಿಬ್ಬರು ಮೂರು ರೊಟ್ಟಿಗಳನ್ನು ಮುರಿಯದೆ ತಿಂದರು" ಈ ಗಣಿತದ ಒಗಟನ್ನು ಬಿಡಿಸುವಂತೆ ಮಕ್ಕಳಿಗೆ ಹೇಳುವರು. | ಗಣಿತ<br>ಸಂಖ್ಯೆಗಳು | ನೂರರೊಳಗಿನ ಸಂಖ್ಯೆಗಳನ್ನು, ಬರೆಯುವುದು, ಹತ್ತು ಬಿಡಿಗಳಾಗಿ ವಿಸ್ತರಿಸುವುದು | ಫಲಕಗಳು, ಕಡ್ಡಿಗಳು, ಗೋಲಿಗಳು, ಮಣಿಗಳು ಹುಣಸೆ ಬೀಜಗಳು, ಬಿಲ್ಲೆಗಳು, ಮಿಂಚುಪಟ್ಟಿಗಳು<br>. | ಶಿಕ್ಷಕ | **ಪೂರ್ವ ಸಿದ್ಧತಾ ಚಟುವಟಿಕೆ–**<br>ಅಣ್ಣ ತಂಗಿಯರಿಬ್ಬರು ಮೂರು ರೊಟ್ಟಿಗಳನ್ನು ಮುರಿಯದೆ ತಿಂದರು ಈ ಗಣಿತದ ಒಗಟನ್ನು ಬಿಡಿಸುವಂತೆ ಮಕ್ಕಳಿಗೆ ಹೇಳುವರು. |
| | 50 ನಿ | | | | ಶಿಕ್ಷಕ | **ಪುನರ್ಬಲನ ಚಟುವಟಿಕೆ**<br>ಪಠ್ಯಪುಸ್ತಕದ ಪುಟ ಸಂಖ್ಯೆ 18 ರಲ್ಲಿರುವ ಚಟುವಟಿಕೆಗೆ ಸಂಬಂಧಿಸಿದಂತಹ ಬೇರೆ ಬೇರೆ ಸಂಖ್ಯೆಗಳನ್ನು ಕೊಟ್ಟು ಮಕ್ಕಳಿಂದ ಸಂಖ್ಯೆಗಳನ್ನು ವಿಸ್ತರಿಸಿ ಬರೆದು ಓದಿಸುವರು. | | | | ಶಿಕ್ಷಕ | **ಪುನರ್ಬಲನ ಚಟುವಟಿಕೆ**<br>ಪಠ್ಯಪುಸ್ತಕದ ಪುಟ ಸಂಖ್ಯೆ 14 ರಲ್ಲಿರುವ ಚಿತ್ರ ನೋಡಿ ಸಂಖ್ಯೆ ಬರೆ ಅಭ್ಯಾಸವನ್ನು ಮಾಡಿಸುವರು. |
| | 20 ನಿ | | | | ಶಿಕ್ಷಕ | ಮೇಲಿನ ಚಟುವಟಿಕೆಯನ್ನು ಪರಿಶೀಲಿಸುವರು. | | | | ಶಿಕ್ಷಕ | ಮೇಲಿನ ಚಟುವಟಿಕೆಯನ್ನು ಪರಿಶೀಲಿಸುವರು. |

| ಅವಧಿ | ಸಮಯ ಹಂಚಿಕೆ | ಎರಡನೇ ತರಗತಿ | | | | | ಮೂರನೇ ತರಗತಿ | | | | |
|---|---|---|---|---|---|---|---|---|---|---|---|
| | | ವಿಷಯ ಮತ್ತು ಪಾಠದ ಹೆಸರು | ಸಾಮರ್ಥ್ಯ ವಿವರ | ಬಳಸಬಹುದಾದ ಬೋಧನಾ ಕಲಿಕಾ ಸಾಮಗ್ರಿಗಳು | ನಿರ್ವಹಣೆ | ಕಲಿಕಾ ಪ್ರಕ್ರಿಯೆ | ವಿಷಯ ಮತ್ತು ಪಾಠದ ಹೆಸರು | ಸಾಮರ್ಥ್ಯ ವಿವರ | ಬಳಸಬಹುದಾದ ಬೋಧನಾ ಕಲಿಕಾ ಸಾಮಗ್ರಿಗಳು | ನಿರ್ವಹಣೆ | ಕಲಿಕಾ ಪ್ರಕ್ರಿಯೆ |
| 1 | 2 | 3 | 4 | 5 | 6 | 7 | 8 | 9 | 10 | 11 | 12 |
| 3ನೇ | 40 ನಿ | ಸಾ.ಉ.ಉ.ಕಾ. | ಕಾಗದದಿಂದ ಆಟಿಕೆಗಳನ್ನು ತಯಾರಿಸುವ ಕೌಶಲ ಬೆಳೆಸುವುದು | ಬಿಳಿಕಾಗದ, ತೆಂಗಿನಕಡ್ಡಿ, ಗೋಂದು, ಕತ್ತರಿ, ಬಟ್ಟೆಚೂರು, ಇತ್ಯಾದಿ | ಶಿಕ್ಷಕ/ಕಿ | ಗಾಳಿ ಪಟ ತಯಾರು ಮಾಡುವ ವಿಧಾನವನ್ನು ಮಕ್ಕಳಿಗೆ ಹೇಳಿ ಕೊಡುವರು <u>ವಿಧಾನ</u> 1. ಒಂದು ಬಿಳಿ ಹಾಳೆ ತೆಗೆದುಕೊಂಡು ಅದನ್ನು ಚೌಕಾಕಾರವಾಗಿ ಮಾಡಿಕೊಳ್ಳುವುದು. 2. ಕಾಗದಕ್ಕೆ ಮೇಲ್ಮುಖಕ್ಕೆ ಕೋಡುಗಳಿರುವಂತೆ ಅಂಟಿನ ಸಹಾಯದಿಂದ ತೆಂಗಿನಕಡ್ಡಿ ಗಳನ್ನು ಆಕಾರದಲ್ಲಿ ಅಂಟಿಸುವುದು. 3. ಕೆಳಗಿನ ಎರಡು ಮೂಲೆಗಳಿಂದ ಬಾಲಂಗೋಸಿಯನ್ನು ಬಟ್ಟೆ ಚೂರುಗಳಿಂದ ಎರಡು ಅಥವಾ ಮೂರು ಮೀಟರ್‌ವರೆಗೆ ಕಟ್ಟುವುದು. 4. ಮೇಲಿನ ಎರಡು ತುದಿಗಳಿಂದ ಹಾಗೂ ಕೇಂದ್ರದಿಂದ ಹಾದು ಹೋಗುವಂತೆ ದಾರಗಳನ್ನು ಕಟ್ಟಿ ಸೂತ್ರ ರಚಿಸಬೇಕು. ಅದಕ್ಕೆ ಮುಂದುವರೆಸಿಕೊಂಡು ದಾರ ಕಟ್ಟಬೇಕು.<br><u>**ಸೂಚನೆ** ಶಿಕ್ಷಕರು ಮೊದಲೇ ಎಲ್ಲಾ ಮಕ್ಕಳಿಗೂ ಹಾಳೆಗಳನ್ನು ಕೊಟ್ಟು ಮಾಡುವ ಕ್ರಮವನ್ನು ಹಂತಹಂತವಾಗಿ ತಿಳಿಸುತ್ತಾ, ಮಧ್ಯೆ ಮಧ್ಯೆ ಚಟುವಟಿಕೆ ಮಾಡುತ್ತಿರುವ ಮಕ್ಕಳಿಗೆ ಸಲಹೆ ಸೂಚನೆ ತಿಳಿಸುವರು.</u> | ಸಾ.ಉ.ಉ.ಕಾ. | ಕಾಗದದಿಂದ ಆಟಿಕೆಗಳನ್ನು ತಯಾರಿಸುವ ಕೌಶಲ ಬೆಳೆಸುವುದು | ಬಿಳಿಕಾಗದ, ತೆಂಗಿನಕಡ್ಡಿ, ಗೋಂದು, ಕತ್ತರಿ, ಬಟ್ಟೆಚೂರು, ಇತ್ಯಾದಿ | ಶಿಕ್ಷಕ/ಕಿ | 2 ನೇ ತರಗತಿಯ ಮಕ್ಕಳು ಮಾಡುವ ಗಾಳಿಪಟ ಮಾಡುವ ಚಟುವಟಿಕೆಯಲ್ಲಿ 3 ನೇ ತರಗತಿಯ ಮಕ್ಕಳು ಸಕ್ರಿಯವಾಗಿ ಭಾಗವಹಿಸುವರು |
| | 40 ನಿ | | | | | ರೇಡಿಯೋ ಪಾಠ | ಚಿಣ್ಣರ ಚುಕ್ಕಿ ರೇಡಿಯೋ ಕಾರ್ಯಕ್ರಮ | | ರೇಡಿಯೋ | ಶಿಕ್ಷಕ/ಕಿ | ರೇಡಿಯೋ ಪಾಠದಲ್ಲಿ ಭಾಗವಹಿಸುವರು |
| 4ನೇ ಅವಧಿ | 10 ನಿ | ಪರಿಸರ ಅಧ್ಯಯನ ನಮ್ಮ ಸುತ್ತಲಿನ ಪ್ರಾಣಿಗಳು | | ಪ್ರಾಣಿ, ಪಕ್ಷಿ, ಕೀಟಗಳ ಚಿತ್ರಗಳು ಅವುಗಳ ಹೆಸರಿನ ಮಿಂಚುಪಟ್ಟಿಗಳು | ಶಿಕ್ಷಕ | **ಪೂರ್ವ ಸಿದ್ಧತಾ ಚಟುವಟಿಕೆ** : ಮಕ್ಕಳು ತಾವು ತಿಳಿದಿರುವ ಪ್ರಾಣಿ ಅಥವಾ ಪಕ್ಷಿಯ ಕಥೆಯನ್ನು ಹೇಳಿಸುವರು | ನಮ್ಮ ಸುತ್ತಲಿನ ಜೀವಿಗಳು | ನಮ್ಮ ಸುತ್ತಲಿನ ಪ್ರಾಣಿ ಮತ್ತು ಸಸ್ಯಗಳನ್ನು ಗುರುತಿಸುವರು ಅವುಗಳ ನಡುವಣ ಹೋಲಿಕೆ ಮತ್ತು ವ್ಯತ್ಯಾಸಗಳನ್ನು ತಿಳಿಯುವರು. | ಬಿನ್ನ ಸಸ್ಯಗಳು ನಿರ್ದಿಷ್ಟ ಬಣ್ಣ ಹಾಕಿರುವ ಪ್ರಾಣಿಗಳ ಚಿತ್ರಗಳು | ಶಿಕ್ಷಕ | **ಪೂರ್ವ ಸಿದ್ಧತಾ ಚಟುವಟಿಕೆ** : ಮಕ್ಕಳು ತಾವು ತಿಳಿದಿರುವ ಪ್ರಾಣಿ ಅಥವಾ ಪಕ್ಷಿಯ ಕಥೆಯನ್ನು ಹೇಳುವರು. |
| | 5 ನಿ | | | | | ಶಿಕ್ಷಕರು ಮಕ್ಕಳನ್ನು ಗುಂಪುಗಳಾಗಿ ವಿಂಗಡಿಸಿ ಪ್ರತೀಗುಂಪಿಗೆ ವಿವಿಧ ಪ್ರಾಣಿ, ಪಕ್ಷಿ ಮತ್ತು ಅವುಗಳ ಹೆಸರುಗಳುಳ್ಳ ಮಿಂಚುಪಟ್ಟಿಗಳನ್ನು ನೀಡಿ ಚಿತ್ರಗಳನ್ನು ಹೊಂದಿಸಲು ಹೇಳುವರು. | | | | | ಮಕ್ಕಳನ್ನು ಮುಂದಿನ ಕಲಿಕೆಗೆ ಅಣಿಗೊಳಿಸುವರು. |
| | 25 ನಿ | | | | ಹಿರೇಮಣಿ | • ಹಿರೇಮಣಿಯ ನೇತೃತ್ವದಲ್ಲಿ ಶಿಕ್ಷಕರು ನೀಡಿದ ಚಟುವಟಿಕೆಗಳನ್ನು ಮಕ್ಕಳು ಮಾಡುವರು. | | | | ಶಿಕ್ಷಕ | <u>**ಕಲಿಕಾಂಶ ಚಟುವಟಿಕೆ**</u> : ಶಿಕ್ಷಕರು, ಸರಳ ಪ್ರಶ್ನೆಗಳನ್ನು ಕೇಳುತ್ತಾ ಪ್ರಾಣಿಗಳು ಚಲಿಸುತ್ತವೆ, ಸಸ್ಯಗಳು ಚಲಿಸುವುದಿಲ್ಲ ಎಂಬ ಅಂಶವನ್ನು ವಿವರಿಸುವರು. ವಿವಿಧ ಸಸ್ಯಗಳನ್ನು ನಿರ್ದಿಷ್ಟ ಬಣ್ಣ ಹಾಕಿರುವ ಪ್ರಾಣಿಗಳ ಚಿತ್ರಗಳನ್ನು ತೋರಿಸಿ. ಸಸ್ಯಗಳು ಸಾಮಾನ್ಯವಾಗಿ ಹಸಿರು ಬಣ್ಣದಲ್ಲಿರುತ್ತದೆ. ಆದರೆ ಪ್ರಾಣಿಗಳಿಗೆ ಬೇರೆ ಬೇರೆ ಬಣ್ಣವಿರುತ್ತದೆ ಎಂಬುದನ್ನು ಉದಾಹರಣೆ ಸಹಿತ ವಿವರಿಸುವರು. ಮಕ್ಕಳನ್ನು ಎರಡು ಗುಂಪುಗಳಾಗಿ ಮಾಡಿ ಪರಸ್ಪರ ಒಗಟು ಬಿಡಿಸುವ ಚಟುವಟಿಕೆ ಮಾಡಿಸುವರು. |
| | 10 ನಿ | | | | | ಮಕ್ಕಳಿಗೆ ನೀಡಿದ ಚಟುವಟಿಕೆಗಳನ್ನು ಪರಿಶೀಲಿಸಿ, ಮಾರ್ಗದರ್ಶನ ಮಾಡುವರು | | | | | <u>**ಚಟುವಟಿಕೆ :**</u> ಶಿಕ್ಷಕರು, ಮಕ್ಕಳಿಗೆ ತಾವು ನೋಡಿರುವ ಪ್ರಾಣಿಗಳ ಹೆಸರನ್ನು ಬರೆದು ಅವುಗಳ ಬಣ್ಣ ಯಾವುದು ಎಂಬುದನ್ನು ಬರೆಯಲು ತಿಳಿಸುವರು. |
| | 25ನಿ | | | ಕೊಕ್ಕು ಮತ್ತು ರೆಕ್ಕೆಗಳಿರುವ ಪ್ರಾಣಿಗಳ ಚಿತ್ರಗಳು | ಶಿಕ್ಷಕ | **ಕಲಿಕಾಂಶ ಚಟುವಟಿಕೆ :**ಶಿಕ್ಷಕರು ಕೊಕ್ಕು ಮತ್ತು ರೆಕ್ಕೆಗಳಿರುವ ಪ್ರಾಣಿಗಳ ಬಗ್ಗೆ, ಚಿತ್ರ ತೋರಿಸುತ್ತಾ ಮತ್ತು ಸುತ್ತಮುತ್ತ ನೋಡಿರುವ ಪ್ರಾಣಿಗಳನ್ನು ಉದಾಹರಿಸುತ್ತಾ ವಿವರಿಸುವರು. ಕೇವಲ ರೆಕ್ಕೆ, ಕೊಕ್ಕುಗಳನ್ನು ಹೊಂದಿರುವ ಪ್ರಾಣಿಗಳನ್ನು ಮಾತ್ರ ಪಕ್ಷಿಗಳೆನ್ನುವರು ಎಂಬುದನ್ನು ಸ್ಪಷ್ಟವಾಗಿ ವಿವರಿಸಿ ಪಕ್ಷಿಗಳಿಗೆ ಕೆಲವು ಉದಾಹರಣೆಗಳನ್ನು ನೀಡುವರು. | | | | ಸ್ವಕಲಿಕೆ | ಮಕ್ಕಳು ಚಟುವಟಿಕೆಯಲ್ಲಿ ತೊಡಗುವರು. |
| | 5 ನಿ | | | | | ಶಿಕ್ಷಕರು ಐದು ಪಕ್ಷಿಗಳ ಚಿತ್ರಗಳನ್ನು ಸಂಗ್ರಹಿಸಲು ತಿಳಿಸುವರು. | | | | | ಮಕ್ಕಳು ನಿರ್ವಹಿಸಿದ ಚಟುವಟಿಕೆಗಳನ್ನು ಪರಿಶೀಲಿಸಿ ಮಾರ್ಗದರ್ಶನ ಮಾಡುವರು. |